ಇ) ಕೃಷಿ ಉತ್ಪನ್ನ ಮಾರುಕಟ್ಟೆ (ಎ ಪಿ ಎಂ ಸಿ)ಯಲ್ಲಿ ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿದ್ದ ತೂಕದವರನ್ನು ಸರ್ಕಾರಿ ನೌಕರರೆಂದು ಪರಿಗಣಿಸುವ ವಿಚಾರ ಇದೆಯೆ ? ಹಾಗಿಲ್ಲದಿದ್ದಲ್ಲಿ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ಸಹಕಾರ ಸಚಿವೆಯರು) —

ಅ) ಸಹಕಾರಿ ಸಂಸ್ಥೆಗಳ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸುವ ಪ್ರಶ್ನೆ ಸರ್ಕಾರದ ಆಲೋಚನೆಯಲ್ಲಿ ಇಲ್ಲ.

ಆ) ಗ್ರಾಮ ಸೇವಾ ಸಹಕಾರ ಸಂಘಗಳ ನೌಕರರು ಈ ಹಿಂದೆ ಉಪವಾಸ ಸತ್ಯಾಗ್ರಹದಲ್ಲಿದ್ದಾಗ ಅವರ ಬೇಡಿಕೆಗಳ ಪರಿಣಾಮದ ಬಗ್ಗೆ ಅವರೊಡನೆ ಚರ್ಚಿಸಿದ ನಂತರ ನಿರ್ಣಯ ಕೈಗೊಳ್ಳಲಾಗುವುದೆಂದು ಸರ್ಕಾರವು ಭರವಸೆ ನೀಡಿತು.

ಅವರ ಬೇಡಿಕೆಯ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಲಾಗುತ್ತಿದ್ದು ಅದನ್ನು ಅವರಿಗೆ ಇಷ್ಟರಲ್ಲಿ ತಿಳಿಸಲಾಗುವುದು.

ಇ) ಕೃಷಿ ಉತ್ಪನ್ನ ಮಾರಾಟ ಸಮಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತೂಕದವರು ಮಾರುಕಟ್ಟೆ ಸಮಿತಿಗಳಿಂದ ಪರವಾನಿ ಪಡೆದು ತೂಕದವರಾಗಿ ಕೆಲಸ ಮಾಡುತ್ತಿರುತ್ತಾರೆ ಮತ್ತು ಇವರಂ ಮಾರುಕಟ್ಟೆ ಸಮಿತಿಗಳಿಂದ ನೇಮಕಗೊಂಡ ನೌಕರರಲ್ಲ. ಕರ್ನಾಟಕ ವ್ಯವಸಾಯೋತ್ಪನ್ನ ಮಾರಾಟ (ನಿಯಂತ್ರಣ) ಕಾಯ್ದೆಯಲ್ಲಿ ತೂಕದವರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸುವ ಅವಕಾಶವಿಲ್ಲವಾದುದರಿಂದ ಅವರನ್ನು ಸರ್ಕಾರಿ ನೌಕರರನ್ನಾಗಿ ವಿಲೀನಗೊಳಿಸುವ ವಿಚಾರ ಸರ್ಕಾರಕ್ಕಿಲ್ಲ.

ಶ್ರೀ ಪಿ.ಸಿ. ಸಿದ್ದನಗೌಡರ್.—ಪ್ರಾಥಮಿಕ ಸೇವಾ ಸಹಕಾರ ಸಂಘಗಳ ಕಾರ್ಯದರ್ಶಿಗಳ ಜೊತೆ ಸರ್ಕಾರದವರು ರಾಜಿ ಮಾಡಿಕೊಂಡು ಒಂದು ನಿರ್ಣಯ ಮಾಡಿದ್ದಾರೆ. ಅದನ್ನು ಯಾವಾಗ ಜಾರಿಗೆ ತರುತ್ತಾರೆ ? ಎ.ಪಿ.ಎಂ.ಸಿ.ಯಲ್ಲಿ ತೂಕಮಾಡಕ್ಕವರಿದ್ದಾರೆ. ಅವರಿಗೆ ಸರಿಯಾದ ಸಂಬಳ ಕೊಡದೆ ಅವರ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ. ಕೇವಲ ೧೫೦ ರೂಪಾಯಿಗೆ ಅವರು ದುಡಿಯುತ್ತಿದ್ದಾರೆ. ಅವರಿಗೆ ಹೆಚ್ಚಿನ ರೀತಿಯಲ್ಲಿ ಅನುಕೂಲ ಕಲ್ಪಿಸಿಕೊಡುತ್ತೀರಾ ? ಅವರನ್ನು ಸರ್ಕಾರಿ ನೌಕರರಂತೆ ಪರಿಗಣಿಸುತ್ತೀರಾ ಎಂದು ನಾನು ಎರಡು ಪ್ರಶ್ನೆ ಕೇಳುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಕಳೆದ ಅಧಿವೇಶನದಲ್ಲಿ ಕೂಡಾ ಬಂದಿದ್ದು ಆಗ ಮಾನ್ಯ ಸದಸ್ಯರೇ ಗಮನಸೆಳೆಯುವ ಸೂಚನೆ ಮುಖಾಂತರ ಕೇಳಿದ್ದರು. ಆಗಲೂ ಇದೇ ಉತ್ತರವನ್ನು ಕೊಟ್ಟಿದ್ದೆ. ಈ ನೌಕರರು ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಬರುವುದರಿಂದ ಸರ್ಕಾರಿ ನೌಕರರು ಎಂಬುದಾಗಿ ಪರಿಗಣಿಸುವುದಕ್ಕಾಗುವುದಿಲ್ಲ. ಆದರೂ ಈ ಸಂಬಂಧವಾಗಿ ನೌಕರರು ಮುಖ್ಯಮಂತ್ರಿಗಳಿಗೆ ಭೇಟಿಯಾಗಿ ಅವರೊಡನೆ ವಿಚಾರ ವಿನಿಮಯ ಮಾಡಿದ್ದು ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಆ ಬಗ್ಗೆ ನಿರ್ಧಾರ ತೆಗೆದು ಕೊಳ್ಳುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರಂತೆ. ಈ ಒಂದು ವಿಚಾರ ಪರಿಶೀಲನೆಯಲ್ಲಿ ಇರುವುದರಿಂದ ಯಾವುದೇ ಒಂದು ನಿರ್ಧಾರವನ್ನು ಇದುವರೆವಿಗೂ ತೆಗೆದುಕೊಂಡಿರುವುದಿಲ್ಲ.

ಶ್ರೀ ಪಿ.ಸಿ. ಸಿದ್ದನಗೌಡರ್.—ಈ ವಿಷಯವಾಗಿ ಕೆ.ಎಚ್. ಪಾಟೀಲರ ಹಾಗೂ ಅಜ್ಜಿಬಾಳ ಹೆಗಡೆಯವರ ಮತಿಯಿಂದ ಸಮಿತಿಗಳನ್ನು ಸಹಾ ಮಾಡಿದ್ದು ಅನೇಕ ಬೇಡಿಕೆಗಳ ಬಗ್ಗೆ ಈ ಸಮಿತಿಗಳು ವಿಚಾರ ಮಾಡಿವೆ. ಇವೆಲ್ಲಾ ಸಮಿತಿಗಳ ವರದಿ ನೋಡಿ ಈ ನೌಕರರ ಬಗ್ಗೆ ಒಂದು ಕಾನೂನು ರಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್.—ವಿಚಾರ ಮಾಡುತ್ತೇನೆ.

ಸಹಕಾರಿ ಕ್ಷೇತ್ರಗಳಲ್ಲಿರುವ ನೂಲಿನ ಗಿರಣಿಗಳು

೨೮೧. ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ).—ಮಾನ್ಯ ಆರೋಗ್ಯ ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸಹಕಾರ ಕ್ಷೇತ್ರದ ನೂಲಿನ ಗಿರಣಿಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ಚಾಲು ಇರುವ ಗಿರಣಿಗಳ ಸಂಖ್ಯೆ ಎಷ್ಟು ?

ಇ) ಮುಚ್ಚಲ್ಪಟ್ಟ ಗಿರಣಿಗಳನ್ನು ಪ್ರಾರಂಭಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳಾವುವು ?

ಈ) ಖಾಸಗೀ ವಾಣಿಜ್ಯೋದ್ಯಮಿಗಳು ಈ ಮುಚ್ಚಲ್ಪಟ್ಟಿರುವ ಗಿರಣಿಗಳನ್ನು ನಡೆಸಲು ಮುಂದೆ ಬಂದರೆ ಇವುಗಳನ್ನು ಅವರಿಗೆ ವಹಿಸಿಕೊಡುವ ವಿಚಾರವು ಸರ್ಕಾರದವರ ಪರಿಶೀಲನೆಯಲ್ಲಿದೆಯೇ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಸಚಿವೆಯವರು).—

ಅ) ನೋಂದಾಯಿಸಿದ್ದು – ೧೮
ಸ್ಥಾಪನೆಯಾಗಿದ್ದು – ೮

ಆ) ಇಲ್ಲ

ಇ) ಮತ್ತು ಈ) ಈ ಬಗ್ಗೆ ಕಾರ್ಯನೀತಿಯನ್ನು ಸದ್ಯದಲ್ಲೇ ರೂಪಿಸಲಾಗುವುದು.

ಶ್ರೀ ಎಸ್. ಎಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ಇವತ್ತು ಯಾವ ಯಾವ ಗಿರಣಿಗಳು ಮುಚ್ಚಿವೆ. ಅವುಗಳ ಹೆಸರನ್ನು ಹೇಳಬೇಕು, ಮತ್ತೆ ಮುಚ್ಚಿರುವ ಗಿರಣಿಗಳನ್ನು ಪರಿಶೀಲಿಸಿ ಅವನ್ನು ಪುನಃ ತೆರೆಯುವುದಕ್ಕೆ ಸರ್ಕಾರ ಯಾವ ಕಾರ್ಯಕ್ರಮವನ್ನು ಎಷ್ಟು ದಿವಸಗಳಲ್ಲಿ ಹಾಕಿಕೊಳ್ಳುತ್ತದೆಂಬುದನ್ನು ಹೇಳಬೇಕು. ಹಾಗೂ ಮುಚ್ಚಿರುವ ಗಿರಣಿಗಳನ್ನು ನಡೆಸಲು ಖಾಸಗಿಯವರು ಮುಂದೆ ಬಂದರೆ, ಅವರು ನಡೆಸುವುದಕ್ಕೆ ಅವಕಾಶವನ್ನು ಕೊಡುತ್ತೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ಬಿಜಾಪುರ, ಬಾಗಲಕೋಟೆ ಹಾಗೂ ರಾಯಚೂರಿನ ಸಹಕಾರಿ ನೂಲಿನ ಗಿರಣಿಗಳು ಮುಚ್ಚಿರುವಂತಹ ಗಿರಣಿಗಳಾಗಿವೆ.

ಶ್ರೀ ಎಸ್. ಎಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸ್ಥಾಪನೆಯಾಗಿರುವ ೮ ಗಿರಣಿಗಳಲ್ಲಿ ಚಾಲು ಇರುವ ಗಿರಣಿಗಳ ಸಂಖ್ಯೆ ೫ ಎಂದು ಹೇಳಿದ್ದಾರೆ. ಆದರೆ ಇವರು ಬಂದ್ ಆಗಿರುವುದು ಎರಡು ಎಂದು ಅವುಗಳ ಹೆಸರನ್ನು ಹೇಳಿದ್ದಾರೆ. ಇವತ್ತು ನೂಲಿನ ಗಿರಣಿಗಳನ್ನು ನಡೆಸಲು ಖಾಸಗಿಯವರು ಮುಂದೆ ಬಂದರೆ ಅವರಿಗೆ ಅವಕಾಶವನ್ನು ಕೊಡುತ್ತೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ಮುಚ್ಚಿರುವ ಗಿರಣಿಗಳನ್ನು ನಡೆಸಲು ಯಾರೇ ಮುಂದೆ ಬಂದರೂ ಅವರಿಗೆ ಲೀಸ್ ಮೂಲಕ ನಡೆಸಲು ಅವರಿಗೆ ಕೊಡುವುದಕ್ಕೆ ನಾವು ವಿಚಾರ ಮಾಡುತ್ತೇವೆ.

ಮುಂದಿನ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕೃಷಿ ಸಾಲಗಳ ಬಗ್ಗೆ

೩೪೭. ಪ್ರೊ ಎಂ.ಡಿ. ನಂಜುಂಡಸ್ವಾಮಿ, (ಧಾರವಾಡ ಗ್ರಾಮಾಂತರ).—ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ರೈತರ ಸಹಕಾರಿ ಬೆಳೆ ಸಾಲದ ಬಾಕಿ ಎಷ್ಟಿದೆ ?

ಆ) ರಾಜ್ಯದ ರೈತರ ಭೂ ಅಭಿವೃದ್ಧಿ ಸಾಲದ ಬಡ್ಡಿ ಎಷ್ಟಿದೆ ?

ಇ) ಈ ಸಾಲದ ಬಡ್ಡಿಯನ್ನು ಮನ್ನಾ ಮಾಡಲು ಸರ್ಕಾರವು ತೀರ್ಮಾನಿಸಿದೆಯೇ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಕುಟುಂಬ ಕಲ್ಯಾಣ ಮತ್ತು ಸಹಕಾರ ಸಚಿವೆಯವರು).—

ಅ) ಜಿಲ್ಲಾ ಸಹಕಾರಿ ಬ್ಯಾಂಕುಗಳು ವಿತರಿಸಿ ರೈತರಿಂದ ಬರಬೇಕಾದ ಬಾಕಿ ಬೆಳೆ ಸಾಲ ದಿನಾಂಕ ೩೦–೬–೧೯೮೯ಕ್ಕೆ ಇದ್ದಂತೆ ರೂ. ೨೪೯.೭೧–೫೬ ಲಕ್ಷಗಳು ಇರುತ್ತದೆ.

ಆ) ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಗೆ ೩೦–೬–೧೯೮೯ಕ್ಕೆ ರೈತರಿಂದ ಬಾಕಿಯಾಗಿರುವ ಬಡ್ಡಿಯ ಮೊತ್ತ ರೂ. ೧೮೫೫.೬೩ ಲಕ್ಷಗಳಾಗಿರುತ್ತವೆ.